1) ಸಂತಾನಹರಣ ಶಸ್ತ್ರ ಚಿಕಿತ್ಸೆ

ದರಗಳು ಒಂದಕ್ಕೆ

ರೂ ಗಳಲ್ಲಿ

ಕ್ರ.ಸಂ	ಸಂಸ್ಥೆಯ ಹೆಸರು	ಗಂಡು	ಹೆಣ್ಣು
1	ಕ್ಯೂಪಾ	375	395
2	ಕರುಣಾ	400	420
3	ಎ ಆರ್ ಎಫ್	400	420
4	ಕೃಪಾ	410	430

2) ಆಂಟಿರೇಬೀಸ್ ಲಸಿಕೆ – ಒಂದು ನಾಯಿಗೆ ರೂ 40/– ರಂತೆ

3) ದಯಾ ಮರಣಕ್ಕೊಳಪಡಿಸುವುದು – ಒಂದು ನಾಯಿಗೆ ರೂ 60/– ರಂತೆ

ಊ) ಈ ಸಂಸ್ಥೆಗಳಿಗೆ ನೀಡಲಾದ ಹಣ ಮತ್ತು ವೆಚ್ಚಗಳ ಬಗ್ಗೆ ದಿನಾಂಕ 31 3 2006 ರವರೆಗೆ ಆಡಿಟ್ ಮಾಡಲಾಗಿದೆ

1460 (1659) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) – ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ನಗರದಲ್ಲಿ ಸಾರಿಗೆ ಇಲಾಖೆಯಿಂದ ಆಟೋ ಪರವಾನಗಿ ನೀಡುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹೌದಾದಲ್ಲಿ, ಪರವಾನಿಗೆ ನೀಡುವ ಯೋಚನೆ ಸರ್ಕಾರಕ್ಕೆ ಇದೆಯೇ,

ಇ) ಇದನ್ನು ಯಾವ ಕಾಲಮಿತಿಯಲ್ಲಿ ನೀಡಲಾಗುವುದು,

ಈ) ಕಳೆದ ಮೂರು ವರ್ಷಗಳಲ್ಲಿ ತುಮಕೂರು ನಗರದ ಸ್ವಾತಂತ್ರ್ಯ ಹೋರಾಟಗಾರು, ಮಾಜಿ ಸೈನಿಕರು, ಹಿರಿಯ ನಾಗರೀಕರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ನೀಡಲಾಗಿರುವ ಆಟೋ ಪರವಾನಿಗಿಗಳು ಎಷ್ಟು? (ವಿವರ ನೀಡುವುದು)

ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು).

ಅ) ಹೌದು

ಆ) ಹೌದು, ತುಮಕೂರು ನಗರ ಸಭಾ ವ್ಯಾಪ್ತಿಯು ಅಭಿವೃದ್ಧಿ ಹೊಂದುತ್ತಿರುವುದರಿಂದ, ರಸ್ತೆಗಳ ಅಗಲೀಕರಣ ಮತ್ತು ಮೂಲ ಸೌಲಭ್ಯಗಳನ್ನು ಆಧರಿಸಿ, ಮುಂಬರುವ ದಿನಗಳಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ಪರವಾನಿಗೆ ನೀಡಲು ಕ್ರಮ ವಹಿಸಲಾಗುವುದು

ಇ) ರಸ್ತೆಗಳ ಅಗಲೀಕರಣ ಮತ್ತು ಮೂಲ ಸೌಲಭ್ಯಗಳ ಲಭ್ಯತೆ ಹಾಗೂ ನಗರದ ಬೆಳವಣಿಗೆ ಗಮನಿಸಿಕೊಂಡು ಮುಂದಿನ ದಿನಗಳಲ್ಲಿ ಈ ಬಗ್ಗೆ ನಿರ್ಣಯಿಸಲಾಗುವುದು

ಈ) ಸ್ವಾತಂತ್ರ ಹೋರಾಟಗಾರರು, ಮಾಜಿ ಸೈನಿಕರು ಮತ್ತು ಹಿರಿಯ ನಾಗರೀಕರಿಂದ ಆಟೋರಿಕ್ಷಾ ಪರವಾನಿಗೆ ಕೋರಿ ಯಾವುದೇ ಅರ್ಜಿ ಇದುವರೆಗೂ ಸ್ವೀಕೃತವಾಗಿರುವುದಿಲ್ಲ ಪರಿಶಿಷ್ಟ ಜಾತಿ/ ಪಂಗಡದವರಿಗೆ ಕಳೆದ ಮೂರು ವರ್ಷಗಳಲ್ಲಿ ನೀಡಲಾದ ಆಟೋರಿಕ್ಷಾ ಪರವಾನಿಗೆಗಳ ವಿವರಗಳು ಈ ಕೆಳಕಂಡಂತಿವೆ

ಅವಧಿ	ಪರವಾನಿಗೆಗಳ ಸಂಖ್ಯೆ
2004–05	11
2005–06	15
2006–07	16
ಒಟ್ಟು	**42**

1461 (1660) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) – ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಧುಗಿರಿ ತಾಲ್ಲೂಕು, ದೊಡ್ಡೇರಿ ಹೋಬಳಿ ಬಡವನಹಳ್ಳಿಯಲ್ಲಿರುವ ಹಾಲಿ ಇರುವ ಔಟ್‌ಪೋಸ್ಟ್ ಅನ್ನು ಮೇಲ್ದರ್ಜೆಗೇರಿಸಲು ಸರ್ಕಾರದ ನಿಲುವೇನು?

ಆ) ಹೌದಾದಲ್ಲಿ, ಈ ಬೇಡಿಕೆ ಈಡೇರಿಸಲು ಸರ್ಕಾರ ಹಾಕಿಕೊಂಡಿರುವ ಕಾಲಮಿತಿ ಏನು?